ಈ) ಸರ್ಕಾರವು ನೀಡುವ ಭದ್ರತೆಯ ಮೇರೆಗೆ ಯೋಜನೆಗಳನ್ನು ಪೂರ್ಣಗೊಳಿಸಲು ಶೇರು ಬಂಡವಾಳದ ಮೂಲಕ ಕ್ರೋಡೀಕರಿಸಲಾಗುವುದು.

575(828) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಇತ್ತೀಚೆಗೆ ತುರುವೇಕೆರೆಯ ಯಂ. ಬೇವಿನಹಳ್ಳಿಯಲ್ಲಿ ಮತ್ತು ಸಂಗಲಾಪುರದಲ್ಲಿನ ವಿದ್ಯುತ್ ತಂತಿಯು ಸ್ಪರ್ಷದಿಂದಾದ ಘಟನೆಯಲ್ಲಿ ಮಡಿದವರಿಗೆ ಮತ್ತು ಗಾಯಗೊಂಡಿರುವವರಿಗೆ ಸರ್ಕಾರ ನೀಡಿದ ಪರಿಹಾರವೆಷ್ಟು;

ಆ) ಇದಕ್ಕೆ ಕಾರಣಕರ್ತರಾದವರ ವಿರುದ್ಧ ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ದಿನಾಂಕ 23-5-2004ರಂದು ಎಂ. ಬೇವಿನಹಳ್ಳಿಯ ಹತ್ತಿರವಿರುವ ಎಂ. ಗಂಗಂನಹಳ್ಳಿ ಗ್ರಾಮದಲ್ಲಿ ನೀರಾವರಿ ಪಂಪುಸೆಟ್ಟಿನ ಸೆಕೆಂಡರಿ ಮಾರ್ಗದ ವಿದ್ಯುತ್ ವಾಹಕದ ಮೇಲೆ ತೆಂಗಿನ ಗರಿ ಬಿದ್ದು ವಾಹಕವು ಮುಳ್ಳು ಬೇಲಿಯ ಮೇಲೆ ಕಡಿದು ಬಿದ್ದು, ಮುಳ್ಳು ತಂತಿಯಲ್ಲಿ ವಿದ್ಯುತ್ ಪ್ರವಹಿಸಿ, ಆಕಸ್ಮಿಕವಾಗಿ ಶ್ರೀಮತಿ ಲಕ್ಷ್ಮಿದೇವಮ್ಮ ಎಂಬುವವರು ಮುಳ್ಳು ತಂತಿ ಬೇಲಿಯನ್ನು ಸ್ಪರ್ಶಿಸಿ ಮರಣ ಹೊಂದಿರುತ್ತಾರೆ. ದಿನಾಂಕ 27-7-2004 ರಂದು ಪ್ರಧಾನ ವ್ಯವಸ್ಥಾಪಕರು, ತುಮಕೂರು ಇವರು ಒಂದು ಲಕ್ಷ ರೂ.ಗಳ ಪರಿಹಾರ ಧನವನ್ನು ಮಂಜೂರು ಮಾಡಿರುತ್ತಾರೆ.

ದಿನಾಂಕ 28-5-2004ರಂದು ಸಂಗಲಾಪುರ ಊರಿನ ಸಮೀಪ ಸೆಕೆಂಡರಿ ಮಾರ್ಗದ ತಂತಿಯೊಂದು ಕಡಿದು ನೆಲದ ಮೇಲೆ ಬಿದ್ದಿದ್ದು ಸಚಿನ ಕುಮಾರ್ ಎಂಬ 6 ವರ್ಷದ ಬಾಲಕ ಆಕಸ್ಮಿಕವಾಗಿ ವಿದ್ಯುತ್ ತಂತಿ ಸ್ಪರ್ಶಿಸಿದಾಗ ಕೈ ಬೆರಳುಗಳು ಸುಟ್ಟಿರುತ್ತದೆ. ಈ ಬಾಲಕನಿಗೆ ರೂ.11,000/ ಗಳ ಪರಿಹಾರ ಧನವನ್ನು ನೀಡಲು ಕ್ರಮ ತೆಗೆದುಕೊಳ್ಳಲಾಗಿದೆ.

ಆ) ವರದಿಗಳನ್ನು ಆಧರಿಸಿ ಸೂಕ್ತ ಕ್ರಮಗಳನ್ನು ಕೈಗೊಳ್ಳಲಾಗುವುದು.

576(829) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದ ಸಲಕರಣೆಗಳಾದ ಪರಿವರ್ತಕಗಳು ಮತ್ತು ಹೆಚ್ಚುವರಿ ಪರಿವರ್ತಕಗಳು ಸಿಮೆಂಟ್ ಕಂಬಗಳು ಮುಂತಾದವುಗಳನ್ನು ಸರಬರಾಜು ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ನಿಜವೇ;

ಆ) ಹಾಗಿದ್ದಲ್ಲಿ, ಈ ದಿಶೆಯಲ್ಲಿ ಕೈಗೊಂಡ ಕ್ರಮಗಳೇನು;

ಇ) ಸಂಪಿಗೆ, ಶೆಟ್ಟಿಗೊಂಡನಹಳ್ಳಿ, ವಿಠಲಾಪುರಗಳಲ್ಲಿ ಉಪ ಸಬ್‌ಸ್ಟೇಷನ್ ತೆರೆಯುವುದರ ಬಗ್ಗೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ?

ಶ್ರೀ ಹೆಚ್.ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ತುರುವೇಕೆರೆ ತಾಲ್ಲೂಕಿನ ವ್ಯಾಪ್ತಿಯಲ್ಲಿ ವಿದ್ಯುತ್ ಸಂಪರ್ಕಕ್ಕೆ ಸಂಬಂಧಿಸಿದ ಸಲಕರಣೆಗಳಾದ ಪರಿವರ್ತಕಗಳು ಮತ್ತು ಸಿಮೆಂಟ್ ಕಂಬಗಳು ಮುಂತಾದವುಗಳನ್ನು ಸರಬರಾಜು ಮಾಡದೇ ಇರುವುದರಿಂದ ಸಾರ್ವಜನಿಕರಿಗೆ ತೊಂದರೆ ಆಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ.

ಆ) ಈಗ ಆರ್.ಸಿ.ಸಿ. ಕಂಬಗಳ ಸರಬರಾಜು ಪ್ರಾರಂಭಗೊಂಡಿದ್ದು, ಇವುಗಳ ಸರಬರಾಜು ವಿಕೆಯು ಮುಂಬರುವ ದಿನಗಳಲ್ಲಿ ಸುಧಾರಿಸುವುದರಿಂದ, ಸಾರ್ವಜನಿಕರಿಗೆ ಅನುಕೂಲವಾಗಲಿದೆ.

ವಿಫಲಗೊಂಡ ಪರಿವರ್ತಕವನ್ನು ಬದಲಾಯಿಸುವ ಕಾರ್ಯಕ್ಕೆ ಸಾಮಾನ್ಯವಾಗಿ ದುರಸ್ತಿಗೊಂಡ ಪರಿವರ್ತಕವನ್ನೇ ಬಳಸಲಾಗುತ್ತಿದೆ. ಆದರೆ ವಿಫಲಗೊಂಡ ಪರಿವರ್ತಕಗಳನ್ನು ದುರಸ್ತಿ ಪಡಿಸುವಲ್ಲಿ ಬೆಂಗಳೂರು ವಿದ್ಯುತ್ ಸರಬರಾಜು ಕಂಪನಿ ನಿಯಮಿತದಲ್ಲಿ ಕೆಲವು ಸಮಸ್ಯೆಗಳು ತಲೆದೋರಿವೆ. ಈ ಸಮಸ್ಯೆಗಳು ಸಂಪೂರ್ಣವಾಗಿ ನಿವಾರಣೆಗೊಳ್ಳುವವರೆಗೆ, ವಿಫಲಗೊಂಡ ಪರಿವರ್ತಕಗಳನ್ನು ಸಾರ್ವಜನಿಕರ ಹಿತದೃಷ್ಟಿಯನ್ನು ಪರಿಗಣಿಸಿ ಹೊಸ ಪರಿವರ್ತಕಗಳ ಮೂಲಕ ಬದಲಾಯಿಸಲಾಗುತ್ತಿದೆ. ಹೆಚ್ಚುವರಿ ಪರಿವರ್ತಕಗಳನ್ನು ಅಳವಡಿಸಲು ಹೊಸ ವಿತರಣಾ ಪರಿವರ್ತಕಗಳನ್ನು ಖರೀದಿ ಮಾಡಲು ಕ್ರಮ ಕೈಗೊಳ್ಳಲಾಗಿದೆ.

ಇ) ಸಂಪಿಗೆಯಲ್ಲಿ ಒಂದು 110/11 ಕೆ.ವಿ. ವಿದ್ಯುತ್ ಸಬ್‌ಸ್ಟೇಷನ್ನನ್ನು ಸ್ಥಾಪಿಸಲು ಉದ್ದೇಶಿಸಲಾಗಿದೆ. ಇದಕ್ಕೆ ಬೇಕಾಗಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲಾಗಿದೆ. ಈ ಹೊಸ ವಿದ್ಯುತ್ ಸಬ್‌ಸ್ಟೇಷನ್‌ಗಳನ್ನು ನಿರ್ಮಾಣ ಮಾಡಬೇಕಾದರೆ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತಕ್ಕೆ ಆರ್ಥಿಕ ಸಂಸ್ಥೆಗಳಿಂದ ಸಾಲ ಸೌಲಭ್ಯವನ್ನು ಪಡೆಯುವುದು ಅನಿವಾರ್ಯವಾಗಿರುತ್ತದೆ. ಅಲ್ಲದೇ, ಸದರಿ ಕಾಮಗಾರಿಯ ವಿವರವಾದ ಯೋಜನಾ ವರದಿಯನ್ನು ಸಿದ್ಧಪಡಿಸಿ, ಆಡಳಿತಾತ್ಮಕ ಮಂಜೂರಾತಿಯನ್ನು ಪಡೆದ ನಂತರ ಆರ್ಥಿಕ ಸಂಸ್ಥೆಗಳಿಗೆ ಸಾಲ ಸೌಲಭ್ಯ ಪಡೆಯಲು ಮಂಜೂರಾದ ವಿವರವಾದ ಯೋಜನಾ ವರದಿಯನ್ನು ಸಲ್ಲಿಸಲಾಗುವುದು. ಆರ್ಥಿಕ ವ್ಯವಸ್ಥೆಯು ಆದ ನಂತರವೇ ಟೆಂಡರ್ ಪ್ರಕ್ರಿಯೆಯನ್ನು ಕೈಗೊಳ್ಳಲು ಸಾಧ್ಯವಾಗುತ್ತದೆ. ಈ ಹಿನ್ನಲೆಯಲ್ಲಿ ಮುಂಬರುವ ವರ್ಷದಲ್ಲಿ ಈ ಉದ್ದೇಶಿತ ವಿದ್ಯುತ್ ಸಬ್-ಸ್ಟೇಷನ್ನಿನ ನಿರ್ಮಾಣವನ್ನು ಪ್ರಾರಂಭಿಸುವ ಗುರಿಯನ್ನು ಹಮ್ಮಿಕೊಳ್ಳಲಾಗಿದೆ.

ಶೆಟ್ಟಿಗೊಂಡನಹಳ್ಳಿ ಮತ್ತು ವಿಠಲಾಪುರಗಳಲ್ಲಿ ಹೊಸ ವಿದ್ಯುತ್ ಸಬ್-ಸ್ಟೇಷನ್‌ಗಳನ್ನು ನಿರ್ಮಾಣ ಮಾಡುವ ಪ್ರಸ್ತಾವನೆಯು ಇರುವುದಿಲ್ಲ.

577(830) : ಶ್ರೀ ಕೃಷ್ಣಪ್ಪ ಎಂ.ಟಿ. (ತುರುವೇಕೆರೆ) ಮಾನ್ಯ ಜಲ ಸಂಪನ್ಮೂಲ ಹಾಗೂ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?